**Spl.C.(Corruption)/5002/2015**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ವಿಜಯನಗರ ಜಿಲ್ಲೆ, ಹೊಸಪೇಟೆ.**

**ಸಿ ಡಬ್ಲೂಃ** 13

**ಪಿ ಡಬ್ಲೂಃ** 9

ಸಾಕ್ಷಿಯ ಹೆಸರು - ಕಟ್ಟೆ ಬಸಪ್ಪ
ತಂದೆಯ ಹೆಸರು - ಹುಲುಗಪ್ಪ
ವಯಸ್ಸು - 39 ವರ್ಷ
ಉದ್ಯೋಗ - ಕಂಪ್ಯೂಟರ್ ಆಪರೇಟರ್
ವಾಸಸ್ಥಳ - ಕಲ್ಲಳ್ಳಿ ಗ್ರಾಮ

**ಸಾಕ್ಷಿಯನ್ನು ದಿನಾಂಕಃ** 28-03-2026 **ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಪಿ. ಪಿ. ಅವರಿಂದ**

ದಿಃ **23-07-2014** ರಂದು ನಾನು ಕಲ್ಲಹಳ್ಳಿಯ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಲ್ಲಿ ಕಂಪ್ಯೂಟರ್ ಆಪರೇಟರ್ ಆಗಿ ಚೆಕ್ ಪೋಸ್ಟ ನಲ್ಲಿ ಕೆಲಸ ಮಾಡುತ್ತಿದ್ದೆ. ಆರೋಪಿ ಕೂಡಾ ಅದೇ ಚೆಕ್ ಪೋಸ್ಟ ನಲ್ಲಿ ಉಪ ವಲಯ ಅರಣ್ಯ ಅಧಿಕಾರಿಯಾಗಿ ಕೆಲಸ ಮಾಡುತ್ತಿದ್ದ. ಚಾಸಾ **-6** ರವರು ಕ್ಲೀನರ್ ಆಗಿ ಕೆಲಸ ಮಾಡುತ್ತಿದ್ದ, ಮೈನ್ಸ ಲಾರಿಯಿಂದ ರೂ. **600/-** ಲಂಚಕ್ಕೆ ಆರೋಪಿ ಬೇಡಿಕೆ ಇಟ್ಟಿದ್ದಾಗಿ ಕೊಡಲು ಸಾಧ್ಯವಿಲ್ಲದ ಕಾರಣ ಚಾಸಾ **-6** ರವರ ಮೊಬೈಲ್ ನ್ನು ಆರೋಪಿ ಅಡ ಇಟ್ಟುಕೊಂಡಿದ್ದಾಗಿ ಲೋಕಾಯುಕ್ತ ಪೋಲಿಸರು ಮಾಹಿತಿ ನೀಡಿದ್ದರು. ಈ ಬಗ್ಗೆ ಹೇಳಿಕೆ ನೀಡಿರುತ್ತೇನೆ. ಬೇರೆ ವಿಚಾರ ನನಗೆ ಗೊತ್ತಿಲ್ಲ. ಸಾಕ್ಷಿ ಆರೋಪಿಯನ್ನು ಗುರುತಿಸಿದ್ದಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಯು ಬಿ ಆರ್., ವಕೀಲರಿಂದಃ ಇಲ್ಲಾ.**

ಕೇಸಿನ ಬಗ್ಗೆ ನನಗೆ ಖುದ್ದು ಮಾಹಿತಿ ಇಲ್ಲಾ. ನಾನು ಹೇಳಿದಂತೆ ಯಾವುದೇ ಘಟನೆ ನಡೆಯದಿದ್ದರೂ ಪೋಲಿಸರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲಾ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ವಿಜಯನಗರ ಜಿಲ್ಲೆ, ಹೊಸಪೇಟೆ.